

# ಸೆಲ್ಫಿ ಮೇನಿಯಾ!

ಬಹುತೇಕ ಯುವಕಯುವತಿಯ ದಿನ ಆರಂಭವಾಗುವುದೇ ಸೆಲ್ಫೀ ಮೂಲಕ. ಎಲ್ಲೆಡೆ ಸೆಲ್ಫಿ ಸಾಂಕ್ರಾಮಿಕ ರೋಗವೆಂಬಂತೆ ಹರಡಿದೆ. ಒಂದೆರಡು ವರ್ಷಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ಈ ಪದ 'ಪದಕೋಶ' ದಲ್ಲಿಯೂ ಸ್ಥಾನ ಪಡೆದಿದೆ. ಪ್ರಾಣ ಹೋದರೂ ಬಿಡಲೊಲ್ಲದು ಈ ಸೆಲ್ಫಿ ಮೋಹ! ಅದರಲ್ಲೂ ಯುವಕ –ಯುವತಿಯರನ್ನು ಗಾಢವಾಗಿ ಆವರಿಸಿದೆ.

'ಹಾಲಿಡೇ ಐಕ್ಯೂ' ಎಂಬ ಆನ್‌ಲೈನ್ ಟ್ರಾವಲ್ ಕಮ್ಯೂನಿಟಿ ಸಂಸ್ಥೆ, ಸೆಲ್ಫಿ ಮೋಹದ ಕುರಿತು 12 ದಶಲಕ್ಷ ಪ್ರವಾಸಿ ಯುವಜನರನ್ನು ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯ ಪ್ರಕಾರ ಶೇಕಡಾ 67 ರಷ್ಟು ಯುವಪ್ರವಾಸಿಗರು 'ಸೆಲ್ಫಿ ಇಲ್ಲದೆ ಪ್ರವಾಸ ಇಲ್ಲ' ಎನ್ನುತ್ತಾರೆ.

ಅದರಲ್ಲೂ ಹೆಂಗೆಳೆಯರಿಗೆ ಹೆಚ್ಚು ಸೆಲ್ಫಿ ಪ್ರೀತಿಯಂತೆ. ಶೇಕಡಾ 41ರಷ್ಟು ಯುವತಿಯರು ಪ್ರವಾಸದ ವೇಳೆ ತಮ್ಮ ಬಳಿಯ ಸ್ಮಾರ್ಟ್‌ಫೋನ್‌ನಿಂದ ಸೆಲ್ಫಿ ತೆಗೆದುಕೊಂಡರೆ, ಶೇಕಡಾ 35 ರಷ್ಟು ಯುವಕರು ಸೆಲ್ಫಿ ತೆಗೆದುಕೊಳ್ಳಲು ಇಚ್ಛಿಸುತ್ತಾರೆ. ಶೇಕಡಾ 21ರಷ್ಟು ಪ್ರವಾಸಿಗರು ಪ್ರವಾಸದ ವೇಳೆ ಸೆಲ್ಫಿ ಸ್ಟಿಕ್ ಜೊತೆಯಲ್ಲಿಯೇ ಒಯ್ಯುತ್ತಾರಂತೆ. ಶೇಕಡಾ ಒಂಬತ್ತರಷ್ಟು ಜನರು ಟ್ರೈಪಾಡ್ ಬಳಸುತ್ತಾರೆ. ಹೇಗಿದೆ ನೋಡಿ ಸೆಲ್ಫಿ ಮೇನಿಯಾ...!

ಸ್ಮಾರ್ಟ್ ಫೋನ್‌ಗಳಲ್ಲಿ ಅತ್ಯುತ್ತಮ ಫೋಟೊ, ಸೆಲ್ಫಿ ತೆಗೆದುಕೊಳ್ಳುವ ಸೌಲಭ್ಯ ಇರುವುದರಿಂದ ಡಿಜಿಟಲ್ ಸಿಂಗಲ್ ಲೆನ್ಸ್ ಕ್ಯಾಮರಾಗಳ ಬಳಕೆ ಕಡಿಮೆಯಾಗಿದೆ. ಆದರೂ ಶೇಕಡಾ 11 ರಷ್ಟು ಮಂದಿ ಈಗಲೂ ಡಿಎಸ್‌ಎಲ್‌ಆರ್ ಕ್ಯಾಮರಾವನ್ನೂ ಬಳಸುತ್ತಾರಂತೆ. ಉಳಿದಂತೆ ಶೇಕಡಾ ಮೂರರಷ್ಟು ಮಂದಿ ಡಿಎಸ್‌ಎಲ್‌ಆರ್ ಮತ್ತು ಸ್ಮಾರ್ಟ್‌ಫೋನ್ ಕ್ಯಾಮೆರಾ ಎರಡನ್ನೂ ಬಳಸುತ್ತಾರೆ ಎನ್ನುತ್ತದೆ ಸಮೀಕ್ಷೆ.

ವೃತ್ತಿಪರ ಕ್ಯಾಮರಾಮೆನ್‌ಗಳು ಡಿಎಸ್‌ಎಲ್‌ಆರ್ ನಿಂದ ತೆಗೆಯಬಹುದಾದ ಅಗಣಿತ ಕೋನಗಳನ್ನು ಸ್ಮಾರ್ಟ್‌ಫೋನ್ ನಿಂದ ತೆಗೆಯಲಾಗದು ಎಂದು ವಾದಿಸುತ್ತಾರೆ. ಆದರೆ ಇಂದು ಮಾರುಕಟ್ಟೆಯಲ್ಲಿರುವ ವೈವಿಧ್ಯಮಯ ಸ್ಮಾರ್ಟ್‌ಫೋನ್‌ಗಳಲ್ಲಿ ನಮಗೆ ಬೇಕೆಂದ ರೀತಿಯಲ್ಲಿ ಹೊಂದಿಸಿಕೊಳ್ಳುವಷ್ಟು ಸೌಲಭ್ಯಗಳಿವೆ. ಶೇಕಡಾ 74 ರಷ್ಟು ಪ್ರವಾಸಿಗರು ಪ್ರವಾಸದ ಸವಿ ನೆನಪನ್ನು ಫೋಟೋ ರೂಪದಲ್ಲಿರಿಸಲು ಬಯಸುತ್ತಾರೆ.

ಸ್ಮಾರ್ಟ್‌ಫೋನ್ ಮೂಲಕ ಸಾಮಾಜಿಕ ಮಾಧ್ಯಮಗಳ ಸಂಪರ್ಕ ಸುಲಭ. ಫೋಟೋ ತೆಗೆದ ತಕ್ಷಣ ಸಾಮಾಜಿಕ ಜಾಲತಾಣಗಳಿಗೆ ಅಪ್‌ಲೋಡ್ ಮಾಡಬಹುದು. ಪ್ರವಾಸಕ್ಕೆ ಹೋದರು ತಕ್ಷಣ ಫೇಸ್‌ಬುಕ್, ಟ್ವಿಟರ್‌ನಲ್ಲಿ ಫೋಟೊ ಹಾಕಬಹುದು. ಹೀಗಾಗಿಯೇ ಯುವಜನರು ಸೆಲ್ಫಿ ಕಡೆಗೆ ಹೆಚ್ಚು ಆಕರ್ಷಿತರಾಗಿದ್ದಾರೆ.

ಸೆಲ್ಫಿ ತೆಗೆಯುವಾಗ ಮೈಮರೆತು ಪ್ರಾಣವನ್ನೇ ಕಳೆದುಕೊಳ್ಳುವ ಘಟನೆಗಳು ಇತ್ತೀಚೆಗೆ ಹೆಚ್ಚಾಗಿವೆ. ವಾಷಿಂಗ್‌ಟನ್ ಪೋಸ್ಟ್ ವರದಿ ಹೇಳುವಂತೆ, ಜಗತ್ತಿನಾದ್ಯಂತ ಸೆಲ್ಫಿ ತೆಗೆಯುವ ಹುಮ್ಮಸ್ಸಿನಲ್ಲಿ ಪ್ರಾಣ ಕಳೆದುಕೊಳ್ಳುವವರ ಪೈಕಿ ಅರ್ಧದಷ್ಟು ಜನರು ಭಾರತದವರಂತೆ! ಪ್ರಾಣ ಹೋದರೂ ಸೆಲ್ಫಿ ಮೋಹ ಹೋಗುವಂತೆ ಕಾಣುತ್ತಿಲ್ಲ!

ಸೆಲ್ಫಿ ತೆಗೆದಯುವವರು ಗಮನಿಸಬೇಕಾದ ಅಂಶವೊಂದಿದೆ. ಪದೇ ಪದೇ ಸೆಲ್ಫಿ ತೆಗೆದುಕೊಳ್ಳುವುದರಿಂದ ಚರ್ಮ ಬೇಗ ಸುಕ್ಕು ಗಟ್ಟುತ್ತದೆ ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ. ಮೊಬೈಲ್ ಫೋನ್‌ನಿಂದ ಹೊರಹೊಮ್ಮುವ ಎಲೆಕ್ಟ್ರೋ ಮ್ಯಾಗ್ನೆಟಿಕ್ ವಿಕಿರಣಗಳು ಚರ್ಮದ ಡಿಎನ್‌ಎಗಳಿಗೆ ಹಾನಿ ಉಂಟುಮಾಡುತ್ತವೆ. ಮೊಬೈಲ್ ಪರದೆಯಿಂದ ಬರುವ ನೀಲಿ ಬೆಳಕು ಚರ್ಮಕ್ಕೆ ಒಳ್ಳೆಯದಲ್ಲ ಎಂದು ಲಂಡನ್‌ನ ಚರ್ಮ ತಜ್ಞರು ಎಚ್ಚರಿಸಿದ್ದಾರೆ.

■ ನಿಸರ್ಗ